# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@yahoo.com

6th Floor,
Kaveri Bhavan,
Bangalore-560009.

ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ17(2)/2016-17/ C४५-11 ದಿನಾಂಕ 31 AUG 2016

ವ್ಯವಸ್ಥಾಪಕ ನಿರ್ದೇಶಕರು,
ಬೆ.ವಿ.ಕಂ. ನಿಗಮ ಕಾರ್ಯಾಲಯ,
ಕೆ.ಆರ್.ವೃತ್ತ, ಬೆಂಗಳೂರು.

ಮಾನ್ಯರೇ,

ವಿಷಯ: ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ RTGS ಮೂಲಕ ವರ್ಗಾಯಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಪತ್ರ ಸಂಖ್ಯೆ. ಕೆಇಪಿಜಿಟಿ/ಪಿಜಿ17(2)/2016-17/617-20 ದಿನಾಂಕ 19.07.2016.
2. ಬೆವಿಕಂ ಪತ್ರ ಸಂಖ್ಯೆ:ಮು.ಪ್ರವ್ಯ(ಹ ಮತ್ತು ವಾ)/ಪಿಂ/ಬಿಸಿ-3/16-17/ಸಿವೈಎಸ್-32 ದಿ:23.08.2016.

* * * * * * *

1. 01.04.2006ಕ್ಕಿಂತ ಹಿಂದೆ ನೇಮಕಾತಿ ಹೊಂದಿದ ಅಧಿಕಾರಿ/ನೌಕರರ ಪ್ರತಿ ತಿಂಗಳ ಕ್ರೋಢಿಕೃತ ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ಅದರ ಮುಂದಿನ ತಿಂಗಳ 5ನೇ ತಾರೀಖಿನೊಳಗಾಗಿ ಪಾವತಿಸುವಂತೆ ವಿಸಕಂಗಳಿಗೆ ಕೋರಲಾಗಿರುತ್ತದೆ. ಆದರೆ ಮಾಸಿಕ ಪಿಂಚಣಿ ವಂತಿಗೆಯನ್ನು ವಿಳಂಬವಾಗಿ ಕೆಲವು ವಿಸಕಂಗಳು ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಪಾವತಿಸುತ್ತಿರುವುದರಿಂದ ವಂತಿಗೆಯ ಹೂಡಿಕೆಗಳಲ್ಲಿ ಗಳಿಸಬಹುದಾದ ಆದಾಯ (ಬಡ್ಡಿ) ಮೊತ್ತವು ಕುಂಠಿತವಾಗುತ್ತಿರುವ ಹಿನ್ನಲೆಯಲ್ಲಿ ಉಲ್ಲೇಖ-(1) ರ ಪತ್ರದಲ್ಲಿ ಕ್ರೋಢೀಕೃತ ಪಿಂಚಣಿ ಮತ್ತು ಉಪದಾನ ವೇತನ ಪಾವತಿಗೆ ಸಮನಾಗಿ ಪರಿಗಣಿಸಿ, ವಂತಿಗೆಯನ್ನು ವಿಳಂಬವಿಲ್ಲದೆ ಪಾವತಿಸುವಂತೆ ಸೂಚಿಸಲಾಗಿತ್ತು.
2. ಉಲ್ಲೇಖ-(2) ರ ಪತ್ರದಲ್ಲಿ ಬೆವಿಕಂನ ಎಲ್ಲಾ ಲೆಕ್ಕಘಟಕಗಳು ಆಗಸ್ಟ್-2016 ರ ವೇತನದಿಂದ ಮುಂದಕ್ಕೆ ಮುರಿಕೆ ಮಾಡುವ ಉದ್ಯೋಗಸ್ಥ/ಉದ್ಯೋಗದಾತ ವಂತಿಗೆ (Employee/Employer Contribution) ಅನ್ನು ವೇತನ ನೀಡುವ ದಿನದಂದೇ ಸಂಬಂದಪಟ್ಟ ವೇತನ ಬಟವಾಡೆದಾರರು ಚಾಚೂ ತಪ್ಪದೇ RTGS ಮೂಲಕ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಬ್ಯಾಂಕ್ ಖಾತೆಗೆ ನೇರವಾಗಿ ಕಳುಹಿಸುವಂತೆ ತಿಳಿಸಲಾಗಿರುತ್ತದೆ.
3. ಕಂಡಿಕೆ (2) ರ ಬಗ್ಗೆ 01.04.2006ಕ್ಕಿಂತ ಹಿಂದೆ ನೇಮಕಾತಿ ಹೊಂದಿದ ಅಧಿಕಾರಿ/ನೌಕರರ ವೇತನ ವಿವರಗಳನ್ನು ಬೆವಿಕಂನ ಲೆಕ್ಕಘಟಕಗಳು ನೇರವಾಗಿ ಬೆವಿಕಂ ನಿಗಮ ಕಛೇರಿಗೆ ಕಳುಹಿಸಲು ಹಾಗೂ ಬೆವಿಕಂ ನಿಗಮ ಕಛೇರಿಯು ಈ ಮಾಹಿತಿಗಳ ಆಧಾರದ ಮೇಲೆ ಚಾಲ್ತಿಯಲ್ಲಿರುವ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನುಸಾರ ಲೆಕ್ಕಾಚಾರ ಮಾಡಿ, ವಂತಿಗೆಯನ್ನು 5ನೇ ದಿನಾಂಕದೊಳಗೆ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ RTGS ಮೂಲಕ ಪಾವತಿಸಲು ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.
4. ಕಂಡಿಕೆ (3) ರ ಬಗ್ಗೆ ಬೆವಿಕಂ ನಿಗಮ ಕಾರ್ಯಾಲಯವು ಎಲ್ಲಾ ಲೆಕ್ಕಘಟಕಗಳಿಗೂ ತಿಳಿಸುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರು (ಹಣಕಾಸು), ಕವಿಪ್ರನಿನಿ &
ಅಧ್ಯಕ್ಷರು ಪಿಂಚಣಿ ಮತ್ತು ಉಪದಾನ ಟ್ರಸ್ಟ್

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಬೆವಿಕಂ
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ&ವಾ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು
3. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಬೆವಿಕಂ
4. ಎಲ್ಲಾ ನಿಯಂತ್ರಣಾಧಿಕಾರಿಗಳು, ಬೆವಿಕಂ
5. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿ, ಬೆವಿಕಂ
6. ಎಲ್ಲಾ ಲೆಕ್ಕಾಧಿಕಾರಿಗಳು, ಬೆವಿಕಂ, ಕಾ & ಪಾ ವಿಭಾಗ.